O.S.No.445.2016 P W - 3

ದಿನಾಂಕ 16.12.2024 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು ಃ ಪ್ರತಿವಾದಿ ಪರ ವಕೀಲರಿಂದ ಃ

ವಾದಿಯವರು ನನಗೆ 20 ವರ್ಷಗಳಿಂದ ಪರಿಚಯ. ಅವರು ನಮ್ಮ ಊರಿನವರಾದ ಕಾರಣ ಪರಿಚಯ. ವಾದಿಯವರ ತಂದೆ ಮಲ್ಲವೀರಯ್ಯ ನನಗೆ ಗೊತ್ತು. ಮಲ್ಲವೀರಯ್ಯ ರವರಿಗೆ ದಾವಾ ಸ್ವತ್ತನ್ನು ಹೊರು ಪಡಿಸಿ ಬೇರೆ ಸ್ವತ್ತುಗಳು ಹಾಗೂ ಟ್ರಾಕ್ಟರ್ ಸಹ ಇದೆ ಎಂದರೆ ಸಾಕ್ಷಿ ಸ್ವತ್ತುಗಳು ಇವೆ ಟ್ರಾಕ್ಟರ್ ಇಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂ. 154/5 ರಲ್ಲಿ 1 ಎಕರೆ 12 ಗುಂಟೆ 1 ನೇ ಪ್ರತಿವಾದಿಯ ಹೆಸರಿನಲ್ಲಿದೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಮಲ್ಲವೀರಯ್ಯ ರವರ ಹೆಸರಿನಲ್ಲಿ ಸರ್ವೆ ನಂ. 2 ,12 , 115/2, 116/3 ಹಾಗೂ ಇನ್ನೂ ಇತರೆ ಜಮೀನುಗಳು ಇವೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಮಲ್ಲವೀರಯ್ಯ ರವರ ಹೆಸರಿನಲ್ಲಿ 7 ಎ ಕರೆ ಗಿಂತ ಹೆಚ್ಚು ಜಮೀನು ಇದೆ ಎಂದರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಮಲ್ಲವೀರಯ್ಯ ರವರು ತಮ್ಮ ಜೀವಿತಾವಧಿಯಲ್ಲಿ 2 ನೇ ಪ್ರತಿವಾದಿಗೆ ವಿಭಾಗ ಮಾಡಿ ದಾವಾ ಸ್ವತ್ತನ್ನು ಕೊಟ್ಟಿದ್ದರು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ದಾವಾ ಸ್ವತ್ತಿನ ಸರ್ವೆ ನಂ. 8/1 ರಲ್ಲಿ 18 ಗುಂಟೆ , 8/3 ರಲ್ಲಿ 17 ಗುಂಟೆ ಆಗಿರುತ್ತದೆ. ದಾವಾ ಸ್ವತ್ತನ್ನು ಮಾರಾಟ ಮಾಡಿರುವ ವಿಚಾರವನ್ನು 1 ನೇ ಪ್ರತಿವಾದಿ ತಿಳಿಸಿದ್ದು ಸಾಕ್ಷಿ ಹೇಳಲು ಅವರೇ ಕರೆದಿದ್ದರು. ನಾನು ವಾದಿಯವರು ಒತ್ತಾಯ ದ ಮೇರೆಗೆ ಸಾಕ್ಷಿ ಹೇಳಲು ಬಂದಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರ ಪ್ರಮಾಣ ಪತ್ರದಲ್ಲಿ ಬರೆಸಿರುವ ಅಂಶಗಳನ್ನು ನಾನೇ ಹೇಳಿ ಬರೆಸಿದ್ದೇನೆ. ಮಲ್ಲವೀರಯ್ಯ ರವರ ಹೆಸರಿನಲ್ಲಿ ಇನ್ನೂ ಹಲವು ಸ್ವತ್ತುಗಳು ಇದ್ದರೂ ಸಹ ಅವುಗಳನ್ನು ಹೊರತುಪಡಿಸಿ ಕೇವಲ ದಾವಾ ಸ್ವತ್ತಿಗೆ ದಾವೆ ಹಾಕಿದ್ದಾರೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ವಾದಿಗಳು 3 ನೇ ಪ್ರತಿವಾದಿ ಮಲ್ಲವೀರಯ್ಯ ರವರಿಗೆ ಮೋಸ ಮಾಡುವ ಉದ್ದೇಶದಿಂದ ದಾವೆ ಹಾಕಿದ್ದಾರೆ ಎಂದರೆ ಗೊತ್ತಿಲ್ಲ

ಎಂದು ನುಡಿಯುತ್ತಾರೆ. ವಾದಿಯವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲು ಮುಗಿಯಿತು.**

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಎರಡನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಕನಕಪುರ